Government of Karnataka

Karnataka Secondary Education Examination Board

Question Paper

ANSWER KEY

A

CCE RF/RR/ PF/PR

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD,
MALLESHWARAM, BENGALURU – 560 003

ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ - 1

MARCH/APRIL 2025 EXAMINATION - 1

ಮಾದರಿ ಉತ್ತರಗಳು

MODEL ANSWERS

ಸಂಕೇತ ಸಂಖ್ಯೆ : 29-E **Code No. : 29-E**

ವಿಷಯ : ಕರ್ನಾಟಕ ಸಂಗೀತ — ಶಾಸ್ತ್ರ ವಿಭಾಗ

Subject : CARNATIC MUSIC — THEORY

(ಇಂಗ್ಲಿಷ್ ಮಾಧ್ಯಮ / English Medium)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(Regular Fresh / Regular Repeater / Private Fresh / Private Repeater)

ದಿನಾಂಕ : 02. 04. 2025] **[ಗರಿಷ್ಠ ಅಂಕಗಳು : 40**

Date : 02. 04. 2025] **[Max. Marks : 40**

Qn. Nos.	Value Points	Total
I.	**Multiple Choice :** **8 × 1 = 8**	
1.	The origin of music is (A) Rigveda (B) Yajurveda (C) Samaveda (D) Atharvanaveda ***Ans. :*** (C) Samaveda	1

Qn. Nos.	Value Points	Total
2.	The number of swaras, in a sthayi in Carnatic music, is (A) eight (B) sixteen (C) twelve (D) twenty-two ***Ans. :*** (B) sixteen	1
3.	The Raga, in which the Sarale varase are sung is (A) Mayamalava gowla (B) Malahari (C) Mohana (D) Madhyamavathi ***Ans. :*** (A) Mayamalava gowla	1
4.	A swara which differentiates between Dheera Shankarabharana and Mechakalyani is (A) Rishabha (B) Gandhara (C) Nishada (D) Madhyama ***Ans. :*** (D) Madhyama	1
5.	There are seven aksharas in an avartha of Triputa tala of Suladi Saptha talas, because the Jathi of Laghu of this tala is (A) Thishra (B) Chaturashra (C) Khanda (D) Mishra ***Ans. :*** (A) Thishra	1
6.	Lakshana geethe is called by that name because the Sahitya (lyrics) of this geethe (A) is composed in Sapthatalas (B) indicates Raga lakshana (C) indicates the penname (ankitha) of Vaggeyakaras (D) indicates the Prakara (genre) of music ***Ans.*** (B) indicates Raga lakshana	1
7.	The birth place of Kanakadasa is (A) Bagewadi (B) Belluru (C) Balehonnuru (D) Bada ***Ans. :*** (D) Bada	1

Qn. Nos.	Value Points	Total
8.	As Nadaswara played by wind, the instrument is called (A) Thatha instrument (B) Sushira instrument (C) Auspicious instrument (D) Folk instrument ***Ans.*** (B) Sushira instrument	1
II.	**Answer the following questions in a sentence each : 8 × 1 = 8**	
9.	What is the reason for music to be associated with Mathematics ? ***Ans. :*** Tala in music.	1
10.	What is Mohana raga called as in Hindustani music system ? ***Ans. :*** Bhoop.	1
11.	Which swara represents Adhara shruthi ? ***Ans. :*** Shadja of Madhyasthayi.	1
12.	What is the number of swaras in arohana and avarohana of a Shadava raga ? ***Ans. :*** six.	1
13.	Which tala starts with druta ? ***Ans. :*** Rupakatala.	1

Qn. Nos.	Value Points	Total
14.	Write a difference between Sarale and Janti Sarale. ***Ans. :*** The simple arrangement of the seven swaras in an orderly way is called Saralevarase. Each swara comes repeated is called Janti Varase. *Example* : | | S R G M P D N Ṡ | | *Sarale Varase* : | | Ṡ N D P M G R S | | *Jantivarase* : | | SS-RR-GG-MM | PP-DD | NN-ṠṠ | | | | ṠṠ-NN-DD-PP | MM-GG | RR-SS | |	1
15.	What is the reason for Basavanna to have mentioned his ankitha (penname) as Koodalasangamadeva in his Vachanas ? ***Ans. :*** Basavanna mentions his Ankitha Koodalasangamadeva in his Vachanas because his deity is Koodalasangamadeva.	1
16.	What is the reason for morsing (morching) to be called a Ghana vadya ? ***Ans. :*** Morching instrument is called as Ghana Vadya because in morching Nada is produced by Metal.	1
III.	**Answer the following questions in *two* to *three* sentences each : 7 × 2 = 14**	
17.	What is the reason for music to be related to Physics ? ***Ans. :*** Nada is associated with Physics. Nada is the origin of music. So production of musical sound, swara sthanas, Shruthi, structure of instruments etc. relate physics. The devices which help to relay music are Amplifier, sound systems, recording devices, radio, Tape recorder etc. are purely related to physics.	2

Qn. Nos.	Value Points	Total
18.	Write a difference between Pillari geethe and Sanchari geethe.	2

Ans. :

Pillari geethe	***Sanchari geethe***
✶ Pillari geethas are in Malahari Raga. ✶ Pillari geethas are simple devotional compositions with simple lyrics. ✶ They begin with Ganapathi Sthutis. ✶ They are composed in chaturashra Roopaka tala and Thishra Triputa Tala.	✶ Sanchari geethas are in different ragas. ✶ They are simple devotional compositions with different ragas and swara Sancharas. ✶ They begin with other Devatha Stuthis. ✶ They are in different Talas.

Qn. Nos.	Value Points	Total
19.	Write a difference between Audava raga and Vakra raga with an example each.	2

Ans. :

Audava raga	***Vakra raga***
✶ Audava raga is a raga having five swaras both in Arohana and Avarohana. ✶ *Example* : Mohana, Hamsadhwani, Hindola.	✶ Raga with disorder in the arrangement in Arohana or Arorohana. ✶ *Example* : Vasantha, Sriraga, Aananda Bhairavi.

<table>
<tr><th>Qn. Nos.</th><th>Value Points</th><th>Total</th></tr>
<tr><td>20.</td><td>Write a difference between Ekatala and Jhampetala.

Ans. :
<table>
<tr><th>Ekataal</th><th>Jhampe taal</th></tr>
<tr><td>✶ Ekataal's Anga is only one Laghu.
✶ Symbol : |∪O</td><td>✶ Jhampe taal's Angas are one Laghu, one Anudhrutha and one Dhrutha.
✶ Symbol : |∪O</td></tr>
</table></td><td>2</td></tr>
<tr><td>21.</td><td>Explain, how music is associated with Psychology, in brief.

Ans. :

Music is a solution for many mental illnesses. Many experiments are being done through music related to Psychology. Discipline is cultivated when music is practised regularly. Life become Joyful.</td><td>2</td></tr>
<tr><td>22.</td><td>Classify the following instruments into Carnatic and Hindustani musical instruments :

Sitar, Veene, Mrudanga, Shehnai, Pakhawaz, Ghatam, Sarangi, Violin.

Ans. :
<table>
<tr><th>Carnatic</th><th>Hindustani</th></tr>
<tr><td>Veena, Mrudanga Ghatam, Violin</td><td>Sitar, Shehnai, Pakawaj, Sarangi.</td></tr>
</table></td><td>2</td></tr>
</table>

Qn. Nos.	Value Points	Total

23. Classify the following compositions as Abhyasagana and Sabhagana compositions :

Sarale varase, Varna, Keerthane, Alankara, Datuvarase, Krithi, Tarasthayi varase, Vachana.

Ans. :

Abhyasagana	***Sabhagana***
Sarale varase	Varna
Datu varase	Keertane
Tharastayi varase	Krithi
Alankara	Vachana

Total: 2

IV. Answer the following questions in brief :

24. Explain, the life history of Sri Tyagaraja, in brief.

Ans. :

- ✶ Sri Thyagaraja was born in 1767 A.C. in Thiruvaruru to the couple Rama Bramha and Seethamma.
- ✶ His Guru was Sonti Venkataramana Bhagavatar.
- ✶ He was Humble devotee of Sri Rama.
- ✶ He had memorised 24000 Shlokas of Ramayana at the young age of five and used to sing melodiously.
- ✶ He composed number of Kruthis with the pen name "Thyagaraja".
- ✶ He has composed number of new ragas.
- ✶ His musical Dramas are Prahalada Bhakthi Vijaya, Nouka Charithre, Sitha Rama Vijaya (Geya Natakas).
- ✶ He composed Ghana raga Pancharatnas, Lalgudi Pancharatnas, Thiruvattiyur Pancharatna etc.
- ✶ He composed Sangathis to his Kruthis.
- ✶ He attained Sadgathi on the Pushya Panchami in the year 1847 A.C.
- ✶ Thyagaraja Aaradhana is celebrated every year in Thiruvayyar.

Total: **6**

<table>
<tr><th>Qn. Nos.</th><th>Value Points</th><th>Total</th></tr>
<tr><td>25.</td><td>Design and write the Swaralankara of Chaturashra Jathi Rupakatala with swaralipi.
Ans. :
Raga : Maya Malava Gowla.
Tala : Rupaktala
Jathi : Chaturashra
Talanga : 1 Dhrutha + 1 laghu
Symbol : O |
Aksharas : 2 + 4 = 6
O |
	S R	S R G M	
	R G	R G M P	
	G M	G M P D	
	M P	M P D N	
	P D	P D N Ṡ	
	Ṡ N	Ṡ N D P	
	N D	N D P M	
	D P	D P M G	
	P M	P M G R	
	M G	M G R S ||</td><td>4</td></tr>
</table>

A

CCE RF/RR/ PF/PR

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD,
MALLESHWARAM, BENGALURU – 560 003

ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ - 1

MARCH/APRIL 2025 EXAMINATION - 1

ಮಾದರಿ ಉತ್ತರಗಳು

MODEL ANSWERS

ಸಂಕೇತ ಸಂಖ್ಯೆ : 29-K **CODE NO. : 29-K**

ವಿಷಯ : ಕರ್ನಾಟಕ ಸಂಗೀತ – ಶಾಸ್ತ್ರವಿಭಾಗ

Subject : CARNATIC MUSIC – THEORY

(ಕನ್ನಡ ಮಾಧ್ಯಮ / Kannada Medium)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)
(Regular Fresh / Regular Repeater / Private Fresh / Private Repeater)

ದಿನಾಂಕ : 02. 04. 2025] **[ಗರಿಷ್ಠ ಅಂಕಗಳು : 40**

Date : 02. 04. 2025] **[Max. Marks : 40**

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
I.	**ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : 8 × 1 = 8**	
1.	ಸಂಗೀತದ ಮೂಲ (A) ಋಗ್ವೇದ (B) ಯಜುರ್ವೇದ (C) ಸಾಮವೇದ (D) ಅಥರ್ವಣವೇದ *ಉತ್ತರ :* (C) ಸಾಮವೇದ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	ಕರ್ನಾಟಕ ಸಂಗೀತದಲ್ಲಿ ಒಂದು ಸ್ಥಾಯಿಯಲ್ಲಿ ಬರುವ ಸ್ವರಗಳ ಸಂಖ್ಯೆ (A) ಎಂಟು (B) ಹದಿನಾರು (C) ಹನ್ನೆರಡು (D) ಇಪ್ಪತ್ತೆರಡು ***ಉತ್ತರ :*** (B) ಹದಿನಾರು	1
3.	ಸರಳೆ ವರಸೆಗಳನ್ನು ಹಾಡುವ ರಾಗ (A) ಮಾಯಾಮಾಳವಗೌಳ (B) ಮಲಹರಿ (C) ಮೋಹನ (D) ಮಧ್ಯಮಾವತಿ ***ಉತ್ತರ :*** (A) ಮಾಯಾಮಾಳವಗೌಳ	1
4.	ಧೀರಶಂಕರಾಭರಣ ಮತ್ತು ಮೇಚಕಲ್ಯಾಣಿ ರಾಗಗಳ ನಡುವಿನ ವ್ಯತ್ಯಾಸವನ್ನು ಸೂಚಿಸುವ ಸ್ವರ (A) ರಿಷಭ (B) ಗಾಂಧಾರ (C) ನಿಷಾದ (D) ಮಧ್ಯಮ ***ಉತ್ತರ :*** (D) ಮಧ್ಯಮ	1
5.	ಸುಳಾದಿ ಸಪ್ತ ತಾಳಗಳಲ್ಲಿ ಬರುವ ತ್ರಿಪುಟತಾಳದ ಒಂದು ಆವರ್ತಕ್ಕೆ ಏಳು ಅಕ್ಷರಗಳು ಬರುತ್ತವೆ. ಏಕೆಂದರೆ ಈ ತಾಳದ ಲಘುವಿನ ಜಾತಿ ; (A) ತಿಶ್ರ (B) ಚತುರಶ್ರ (C) ಖಂಡ (D) ಮಿಶ್ರ ***ಉತ್ತರ :*** (A) ತಿಶ್ರ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
6.	ಲಕ್ಷಣಗೀತೆಯನ್ನು ಆ ಹೆಸರಿನಿಂದ ಕರೆಯಲು ಕಾರಣವೇನೆಂದರೆ, ಈ ಗೀತೆಯ ಸಾಹಿತ್ಯವು (A) ಸಪ್ತತಾಳಗಳಲ್ಲಿ ರಚಿತವಾಗಿದೆ (B) ರಾಗಲಕ್ಷಣವನ್ನು ಸೂಚಿಸುತ್ತದೆ (C) ವಾಗ್ಗೇಯಕಾರರ ಅಂಕಿತವನ್ನು ಸೂಚಿಸುತ್ತದೆ (D) ಸಂಗೀತದ ಪ್ರಕಾರವನ್ನು ಸೂಚಿಸುತ್ತದೆ ***ಉತ್ತರ :*** (B) ರಾಗಲಕ್ಷಣವನ್ನು ಸೂಚಿಸುತ್ತದೆ	1
7.	ಕನಕದಾಸರ ಜನ್ಮಸ್ಥಳ (A) ಬಾಗೇವಾಡಿ (B) ಬೇಲೂರು (C) ಬಾಳೆ ಹೊನ್ನೂರು (D) ಬಾಡ ***ಉತ್ತರ :*** (D) ಬಾಡ	1
8.	ನಾದಸ್ವರವು ಗಾಳಿಯಿಂದ ನುಡಿಯುವುದರಿಂದ ಈ ವಾದ್ಯವನ್ನು (A) ತತ ವಾದ್ಯವೆನ್ನುವರು (B) ಸುಷಿರ ವಾದ್ಯವೆನ್ನುವರು (C) ಮಂಗಳ ವಾದ್ಯವೆನ್ನುವರು (D) ಜಾನಪದ ವಾದ್ಯವೆನ್ನುವರು ***ಉತ್ತರ :*** (B) ಸುಷಿರ ವಾದ್ಯವೆನ್ನುವರು	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
II.	**ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು : 8 × 1 = 8**	
9.	ಸಂಗೀತವು ಗಣಿತಶಾಸ್ತ್ರದೊಂದಿಗೆ ಸಂಬಂಧ ಹೊಂದಿರಲು ಕಾರಣವೇನು ?	
	ಉತ್ತರ :	
	ಸಂಗೀತದಲ್ಲಿರುವ ತಾಳ	1
10.	ಹಿಂದೂಸ್ತಾನಿ ಸಂಗೀತ ಪದ್ಧತಿಯಲ್ಲಿ ಮೋಹನ ರಾಗವನ್ನು ಏನೆಂದು ಕರೆಯುತ್ತಾರೆ ?	
	ಉತ್ತರ :	
	ಭೂಪ್	1
11.	ಆಧಾರ ಶ್ರುತಿಯನ್ನು ಸೂಚಿಸುವ ಸ್ವರ ಯಾವುದು ?	
	ಉತ್ತರ :	
	ಮಧ್ಯಸ್ಥಾಯಿಯ ಷಡ್ಜ	1
12.	ಷಾಡವ ರಾಗದ ಆರೋಹಣ ಮತ್ತು ಅವರೋಹಣಗಳಲ್ಲಿ ಬರುವ ಸ್ವರಗಳ ಸಂಖ್ಯೆ ಎಷ್ಟು ?	
	ಉತ್ತರ :	
	ಆರು	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
13.	ದ್ರುತದಿಂದ ಪ್ರಾರಂಭವಾಗುವ ತಾಳ ಯಾವುದು ? ***ಉತ್ತರ :*** ರೂಪಕ ತಾಳ	1
14.	ಸರಳೆ ಮತ್ತು ಜಂಟಿ ವರಸೆಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ. ***ಉತ್ತರ :*** ಸ್ವರಗಳ ಸರಳ ಹಾಗೂ ವಿವಿಧ ಕ್ರಮಬದ್ಧ ಜೋಡಣೆಯೇ ಸರಳೆ ವರಸೆ. ಪ್ರತಿಯೊಂದು ಸ್ವರಗಳು ಜೋಡಿಯಾಗಿ ಬರುವುದು – ಜಂಟಿ ವರಸೆ. *ಉದಾ. :* ಸರಳೆ ವರಸೆ – || ಸ ರಿ ಗ ಮ ಪ ದ ನಿ ಸ಼ || || ಸ಼ ನಿ ದ ಪ ಮ ಗ ರಿ ಸ || ಜಂಟಿ ವರಸೆ – ||ಸಸ–ರಿರಿ–ಗಗ–ಮಮ–ಪಪ–ದದ–ನಿನಿ–ಸ಼ಸ಼|| ||ಸ಼ಸ಼–ನಿನಿ–ದದ–ಪಪ|ಮಮ–ಗಗ–ರಿರಿ–ಸಸ||	1
15.	ಬಸವಣ್ಣನವರು ತಮ್ಮ ವಚನಗಳಲ್ಲಿ 'ಕೂಡಲಸಂಗಮದೇವ' ಎಂಬ ಅಂಕಿತವನ್ನು ಬಳಸಲು ಕಾರಣವೇನು ? ***ಉತ್ತರ :***	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಬಸವಣ್ಣನವರ ಆರಾಧ್ಯದೈವ ಕೂಡಲಸಂಗಮದೇವ ಆದ್ದರಿಂದ ಅವರು ತಮ್ಮ ವಚನಗಳಲ್ಲಿ ಕೂಡಲಸಂಗಮದೇವ ಎಂಬ ಅಂಕಿತವನ್ನು ಬಳಸಿದರು.	1
16.	ಮೋರ್ಚಿಂಗ್ ವಾದ್ಯವನ್ನು ಘನವಾದ್ಯವೆಂದು ಕರೆಯಲು ಕಾರಣವೇನು ?	
	ಉತ್ತರ :	
	ಲೋಹದಿಂದ ನಾದೋತ್ಪತ್ತಿ ಆಗುವುದರಿಂದ ಮೋರ್ಚಿಂಗ್ ವಾದ್ಯವನ್ನು ಘನವಾದ್ಯವೆನ್ನುವರು.	1
III.	**ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸುವುದು : 7 × 2 = 14**	
17.	ಸಂಗೀತವು ಭೌತಶಾಸ್ತ್ರದೊಂದಿಗೆ ನಿಕಟ ಸಂಬಂಧವನ್ನು ಹೊಂದಿರಲು ಕಾರಣವೇನು ?	
	ಉತ್ತರ :	
	ನಾದವು ಭೌತಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯ. ಸಂಗೀತಕ್ಕೆ ನಾದವೇ ಮೂಲ. ಹೀಗಾಗಿ ನಾದೋತ್ಪತ್ತಿ, ಸ್ವರಸ್ಥಾನಗಳು, ಸ್ಥಾಯಿಸ್ವರದ ಸೂಕ್ಷ್ಮ ಶ್ರುತಿಗಳು, ವಾದ್ಯಗಳ ರಚನೆ, ವಾದ್ಯಗಳ ನಾದದ ಗುಣಮಟ್ಟ ಇವೇ ಮುಂತಾದ ವಿಷಯಗಳು ಭೌತಶಾಸ್ತ್ರಕ್ಕೂ ಮತ್ತು ಸಂಗೀತಕ್ಕೂ ಹಾಸು ಹೊಕ್ಕಾಗಿದೆ. ಇದಲ್ಲದೆ ಸಂಗೀತ ಪ್ರಸಾರ ಕಾರ್ಯಕ್ಕೆ ನೆರವಾಗುವ ಧ್ವನಿವರ್ಧಕ ಯಂತ್ರ, ಧ್ವನಿ ಮುದ್ರಣ ಯಂತ್ರ, ರೇಡಿಯೋ,	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಟೇಪ್‌ರೆಕಾರ್ಡರ್ ಇವೇ ಮುಂತಾದ ಸಾಧನಗಳು ಭೌತಶಾಸ್ತ್ರಕ್ಕೆ ಸಂಬಂಧಿಸಿರುವುದನ್ನು ಗಮನಿಸಬೇಕು. ಇದಕ್ಕಿಂತ ಹೆಚ್ಚಾಗಿ ಸಂಗೀತವನ್ನು ಧ್ವನಿ ಮುದ್ರಿಸುವ ಸ್ಟುಡಿಯೋ ಅಥವಾ ಧ್ವನಿ ಮುದ್ರಣ ಕೊಠಡಿಗಳು, ಪ್ರತಿಧ್ವನಿಯು ಬರದಂತಹ ಸಂಗೀತ ಸಭಾಂಗಣಗಳು, ಗ್ರಾಮೋಫೋನ್ ಇವುಗಳೆಲ್ಲವೂ ಭೌತಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳೇ ಆಗಿವೆ.	2
18.	ಪಿಳ್ಳಾರಿಗೀತೆ ಮತ್ತು ಸಂಚಾರಿ ಗೀತೆಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ. ***ಉತ್ತರ :***	

ಪಿಳ್ಳಾರಿಗೀತೆ	***ಸಂಚಾರಿಗೀತೆ***
✶ ಪಿಳ್ಳಾರಿ ಗೀತೆಗಳು ಮಲಹರಿ ರಾಗದಲ್ಲಿವೆ.	✶ ಸಂಚಾರಿ ಗೀತೆಗಳು ವಿವಿಧ ರಾಗಗಳಲ್ಲಿರುತ್ತವೆ.
✶ ಪಿಳ್ಳಾರಿ ಗೀತೆಗಳು ಸರಳ ಸಾಹಿತ್ಯದ ಭಕ್ತಿಪ್ರಧಾನವಾದ, ಸರಳ ಸ್ವರ ಸಂಚಾರದ ರಚನೆ.	✶ ವಿವಿಧ ರಾಗಗಳ ಮತ್ತು ವಿವಿಧ ಸ್ವರಗಳ ಸಂಚಾರ ಹಾಗೂ ಸರಳ ಸಾಹಿತ್ಯದ ದೇವತಾಸ್ತುತಿಯಾಗಿ ರುತ್ತದೆ.
✶ ಗಣಪತಿ ಸ್ತುತಿಯಿಂದ ಪ್ರಾರಂಭ ವಾಗುವ ಗೀತೆಗಳು	✶ ವಿವಿಧ ದೇವತಾಸ್ತುತಿಯ ಸಾಹಿತ್ಯವಿರುತ್ತದೆ.
✶ ಚತುರಶ್ರಜಾತಿ ರೂಪಕ ತಾಳ ಹಾಗೂ ತಿಶ್ರಜಾತಿ ತ್ರಿಪುಟ ತಾಳಗಳಿಂದ ಒಳಗೊಂಡಿರುತ್ತದೆ.	✶ ವಿವಿಧ ತಾಳಗಳಲ್ಲಿರುತ್ತವೆ.

2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
19.	ಔಡವ ಮತ್ತು ವಕ್ರರಾಗಗಳ ನಡುವಿನ ಒಂದು ವ್ಯತ್ಯಾಸವನ್ನು ಒಂದೊಂದು ಉದಾಹರಣೆಯೊಂದಿಗೆ ಬರೆಯಿರಿ. **ಉತ್ತರ:**	

ಔಡವರಾಗ	ವಕ್ರರಾಗ
✳ ಔಡವರಾಗಗಳ ಆರೋಹಣ ಅಥವಾ ಅವರೋಹಣಗಳಲ್ಲಿ ಐದು ಸ್ವರಗಳಿರುತ್ತವೆ.	✳ ರಾಗದ ಆರೋಹಣ ಅಥವಾ ಅವರೋಹಣಗಳಲ್ಲಿ ಸ್ವರಗಳು ವಕ್ರವಾಗಿರುತ್ತವೆ.
✳ ಉದಾ. : ಹಂಸಧ್ವನಿ, ಮೋಹನ, ಹಿಂದೋಳ ಮುಂತಾದವು.	✳ ಉದಾ. : ವಸಂತ, ಶ್ರೀರಾಗ, ಆನಂದಭೈರವಿ ಮುಂತಾದುವು.

2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
20.	ಏಕತಾಳ ಮತ್ತು ಝುಂಪೆತಾಳಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ. **ಉತ್ತರ:**	

ಏಕತಾಳ	ಝುಂಪೆತಾಳ
✳ ಏಕತಾಳದ ಅಂಗಗಳು ಒಂದು ಲಘು ಮಾತ್ರ	✳ ಝುಂಪೆ ತಾಳದ ಅಂಗಗಳು ಒಂದು ಲಘು, ಒಂದು ಅನುದ್ರುತ ಹಾಗೂ ಒಂದು ದ್ರುತ
✳ ಚಿಹ್ನೆ – I	✳ ಚಿಹ್ನೆ – I ∪ O

2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
21.	ಸಂಗೀತವು ಮನೋವಿಜ್ಞಾನದೊಂದಿಗೆ ಹೇಗೆ ಸಂಬಂಧವನ್ನು ಹೊಂದಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ. ***ಉತ್ತರ :*** ಸಂಗೀತವು ಮನಸ್ಸಿಗೆ ನೆಮ್ಮದಿಯನ್ನು ನೀಡುವ ಲಲಿತ ಕಲೆಗಳಲ್ಲಿ ಒಂದಾಗಿದೆ. ಮಾನಸಿಕ ಒತ್ತಡಗಳನ್ನು ಸಂಗೀತದ ಮೂಲಕ ಪರಿಹರಿಸುವ ಪ್ರಯೋಗಗಳು ಮನೋವಿಜ್ಞಾನದಲ್ಲಿ ಇತ್ತೀಚೆಗೆ ಅಧಿಕ ಪ್ರಮಾಣದಲ್ಲಿ ನಡೆಯುತ್ತಿದೆ. ಮಾನಸಿಕ ಬೆಳವಣಿಗೆಯು ಪುಷ್ಟಿಕರವಾದಾಗ, ಶಿಸ್ತು, ಸಂಗೀತ ಅಭ್ಯಾಸಿಗಳಲ್ಲಿ ತಾನಾಗಿಯೇ ಏರ್ಪಡುವುದು. ಜೀವನವು ಸುಖಮಯವಾಗುವುದು.	2
22.	ಈ ಕೆಳಗಿನ ಸಂಗೀತ ವಾದ್ಯಗಳನ್ನು ಕರ್ನಾಟಕ ಮತ್ತು ಹಿಂದೂಸ್ಥಾನಿ ವಾದ್ಯಗಳಾಗಿ ವರ್ಗೀಕರಿಸಿ ಬರೆಯಿರಿ : ಸಿತಾರ್, ವೀಣೆ, ಮೃದಂಗ, ಶಹನಾಯ್, ಪಕವಾಜ್, ಘಟಂ, ಸಾರಂಗಿ, ಪಿಟೀಲು. ***ಉತ್ತರ :*** ***ಕರ್ನಾಟಕ ಸಂಗೀತ ಪದ್ಧತಿ:*** ✶ ವೀಣೆ, ಮೃದಂಗ, ಘಟಂ, ಪಿಟೀಲು. ***ಹಿಂದೂಸ್ಥಾನಿ ಸಂಗೀತ ಪದ್ಧತಿ:*** ✶ ಸಿತಾರ್, ಶಹನಾಯ್, ಪಕವಾಜ್, ಸಾರಂಗಿ	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು

23. ಈ ಕೆಳಗಿನ ರಚನೆಗಳನ್ನು ಅಭ್ಯಾಸಗಾನ ಹಾಗೂ ಸಭಾಗಾನ ರಚನೆಗಳಾಗಿ ವರ್ಗೀಕರಿಸಿ ಬರೆಯಿರಿ :

ಸರಳೆ ವರಸೆ, ವರ್ಣ, ಕೀರ್ತನೆ, ಅಲಂಕಾರ, ದಾಟುವರಸೆ, ಕೃತಿ, ತಾರಸ್ಥಾಯಿ ವರಸೆ, ವಚನ.

ಉತ್ತರ :

ಅಭ್ಯಾಸಗಾನ ರಚನೆ	**ಸಭಾಗಾನ ರಚನೆ**
ಸರಳೆ ವರಸೆ, ದಾಟುವರಸೆ, ತಾರಸ್ಥಾಯಿ ವರಸೆ, ಅಲಂಕಾರ	ವರ್ಣ, ಕೀರ್ತನೆ, ಕೃತಿ, ವಚನಗಳು.

2

IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸುವುದು :

24. ಶ್ರೀ ತ್ಯಾಗರಾಜರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಉತ್ತರ :

* ತ್ಯಾಗರಾಜರು ಕ್ರಿ.ಶ. 1767 ರಲ್ಲಿ ತಿರುವಾರೂರಿನಲ್ಲಿ ರಾಮಬ್ರಹ್ಮ ಮತ್ತು ಸೀತಮ್ಮ ದಂಪತಿಗಳಿಗೆ ವರಪುತ್ರನಾಗಿ ಜನಿಸಿದರು.
* ಸೊಂಠಿ ವೆಂಕಟರಮಣ ಭಾಗವತರು ಇವರ ಗುರುಗಳು.
* ಶ್ರೀರಾಮನ ಪರಮ ಭಕ್ತರು.
* ತಮ್ಮ ಐದನೆಯ ವಯಸ್ಸಿನಲ್ಲೇ ವಾಲ್ಮೀಕಿ ರಾಮಾಯಣದ 24 ಸಾವಿರ ಶ್ಲೋಕಗಳನ್ನು ಕಂಠಪಾಠ ಮಾಡಿ ಸುಮಧುರವಾಗಿ ಹಾಡುತ್ತಿದ್ದರು.

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	✳ 'ತ್ಯಾಗರಾಜ' ಎಂಬ ಅಂಕಿತದೊಡನೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ✳ ಅನೇಕ ಹೊಸ ರಾಗಗಳನ್ನು ರೂಪಿಸಿದ್ದಾರೆ. ✳ ಪ್ರಹ್ಲಾದ ಭಕ್ತಿ ವಿಜಯ, ನೌಕಾಚರಿತ್ರೆ, ಸೀತಾರಾಮ ವಿಜಯ – ಎಂಬ ಗೇಯನಾಟಕ ರಚನೆ. ✳ ಘನರಾಗ ಪಂಚರತ್ನ, ಲಾಲ್ಗುಡಿ ಪಂಚರತ್ನ, ತಿರುವೊಟ್ಟಿಯೂರು ಪಂಚರತ್ನ ಇತ್ಯಾದಿ ಪಂಚರತ್ನ ಕೃತಿಗಳನ್ನು ರಚಿಸಿದ್ದಾರೆ. ✳ ಕೃತಿಗಳಿಗೆ ಸಂಗತಿಗಳನ್ನು ಅಳವಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ✳ 1847 ರ ಪುಷ್ಯಮಾಸದ ಪಂಚಮಿಯಂದು ಶ್ರೀರಾಮನ ಪಾದಾರವಿಂದವನ್ನು ಸೇರಿದರು. ✳ ಇಂದಿಗೂ ತ್ಯಾಗರಾಜರ ಆರಾಧನೆಯನ್ನು ತಿರುವಾಯೂರಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.	6
25.	ಚತುರಶ್ರಜಾತಿ ರೂಪಕತಾಳದ ಸ್ವರಾಲಂಕಾರವನ್ನು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. ***ಉತ್ತರ:*** ತಾಳ : ರೂಪಕ ತಾಳ ಜಾತಿ : ಚತುರಶ್ರಜಾತಿ ತಾಳಾಂಗ : 1 ದ್ರುತ + 1 ಲಘು ಚಿಹ್ನೆ : O + I ಅಕ್ಷರಗಳು : 2 + 4 = 6	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	O | || ಸ ರಿ | ಸ ರಿ ಗ ಮ || || ರಿ ಗ | ರಿ ಗ ಮ ಪ || || ಗ ಮ | ಗ ಮ ಪ ದ || || ಮ ಪ | ಮ ಪ ದ ನಿ || || ಪ ದ | ಪ ದ ನಿ ಸ̇ || || ಸ̇ ನಿ | ಸ̇ ನಿ ದ ಪ || || ನಿ ದ | ನಿ ದ ಪ ಮ || || ದ ಪ | ದ ಪ ಮ ಗ || || ಪ ಮ | ಪ ಮ ಗ ರಿ || || ಮ ಗ | ಮ ಗ ರಿ ಸ ||	4

AglaSem Earn While You Learn Program!

Share your recent question papers with us and get paid!
अपने हाल के प्रश्न पत्र हमें भेजें और कमाएँ!

To participate, email us with the following details:
भाग लेने के लिए हमें निम्न विवरण के साथ ईमेल करें:

- Your Name
- Your Class
- Your Board
- Details of the Question Papers you have
  आपके पास उपलब्ध प्रश्न पत्रों का विवरण

Our team will reach out to you with the next steps.
हमारी टीम आगे की प्रक्रिया के लिए आपसे संपर्क करेगी।

Email: **support@aglasem.com**

Study Materials

aglasem.com

Model Papers

Sample Papers

Half Yearly Sample Papers

Important Resources

Periodic Table

Writing Skills / Formats

Maps of India / World

Notes

- Class 6 Notes
- Class 7 Notes
- Class 8 Notes
- Class 9 Notes
- Class 10 Notes
- Class 11 Notes
- Class 12 Notes

Books and Solutions

NCERT Books

NCERT Book Solutions

HC Verma Chapter Wise Solutions

RD Sharma Solutions

CGBSE Solutions